# ಉಪ ತಹಶೀಲ್ದಾರರ ನ್ಯಾಯಾಲಯ, ತಂಬ್ರಹಳ್ಳಿ-583224

OFFICE OF THE DEPUTY TAHASILDAR, THAMBRAHALLI-583224

ಎ.ವಿಲೇ.ನಂ.ಕಂ.ಪಹಣಿ.ವಿವಾದ/44/2015-16 ದಿನಾಂಕ: 13.10.2016

ಉಪತಶೀಲ್ದಾರರು: ಶ್ರೀ ನಾಗರಾಜ. ಹೆಚ್.
ಉಪತಹಶೀಲ್ದಾರರು
ನಾಡ ಕಛೇರಿ ತಂಬ್ರಹಳ್ಳಿ

| ವಾದಿ (ಶ್ರೀ/ಶ್ರೀಮತಿ) | ಪ್ರತಿವಾದಿ (ಶ್ರೀ/ಶ್ರೀಮತಿ) |
|---|---|
| ಬಿ ದೇವವ್ವ ಗಂಡ ಲೇಟ್ ಬಿ ಭಾಸ್ಕರ<br>ಯಡ್ರಾಮನಹಳ್ಳಿ ಗ್ರಾಮ ಹಬೊ ಹಳ್ಳಿ ತಾಲೂಕು | ಬಿ ಮಲ್ಲಿಕಾರ್ಜುನ ತಂದೆ ಸಣ್ಣಕೊಟ್ರಪ್ಪ<br>ಯಡ್ರಮ್ಮನಹಳ್ಳಿ ಗ್ರಾಮ ಹಬೊ ಹಳ್ಳಿ ತಾಲೂಕು |

**ವ್ಯಾಜ್ಯದ ಜಮೀನಿನ ವಿವರ**

| ಗ್ರಾಮ | ಸ.ನಂ. | ವಿಸ್ತೀರ್ಣ |
|---|---|---|
| ಹೀರೇಸೊಬಟಿ | 14 &<br>84/ಬಿ/1 | 3.37 &<br>2.02 |

*****

**ಪೀಠಿಕೆ:**

ಹಗರಿ ಬೊಮ್ಮನಹಳ್ಳಿ ತಾಲೂಕು ತಂಬ್ರಹಳ್ಳಿ ಹೋಬಳಿ ಹಿರೇಸೊಬಟಿ ಗ್ರಾಮದ ಸ.ನಂ.14, ಮತ್ತು 84/ಬಿ/1 ವಿಸ್ತೀರ್ಣ ಕ್ರಮವಾಗಿ 03.37 ಮತ್ತು 02.02 ಎಕರೆ ವಿವಾದಾಸ್ಪದ ಜಮೀನುಗಳಿಗೆ ಸಂಬಂಧಿಸಿದಂತೆ ಪೋತಿ ವಾರಸ ಪ್ರಕಾರ ಹಕ್ಕುಬದಲಾವಣೆ ಸಂಬಂಧ ಹಕ್ಕು ಬದಲಾವಣೆ ಆದೇಶ ಸಂಖ್ಯೆ:ಹೆಚ್33/2015-16 ರಲ್ಲಿ ಪ್ರತಿವಾದಿಗಳಿಂದ ತಕರಾರು ಬಂದಿರುವುದರಿಂದ ಪ್ರಕರಣವು ವಿವಾದಸ್ಪದವೆಂದು ಪರಿಗಣಿಸಿ ಕಂದಾಯ ನಿರೀಕ್ಷಕರು ತಂಬ್ರಹಳ್ಳಿ ಇವರು ಪ್ರಸ್ತುತ ಕಡತವನ್ನು ಈ ಕಛೇರಿಗೆ ಸಲ್ಲಿಸಿರುತ್ತಾರೆ.

ಕಡತವನ್ನು ಪರಿಶೀಲಿಸಲಾಗಿ, ನೈಸರ್ಗಿಕ ನ್ಯಾಯದ ಹಿತದೃಷ್ಟಿಯಿಂದ ಪ್ರಕರಣದ ವಿಚಾರಣೆಯನ್ನು ದಿನಾಂಕ:31.03.2016 ರಂದು ನಿಗಧಿಗೊಳಿಸಿ ಉಭಯ ಪಕ್ಷಗಳಿಗೆ ನೋಟೀಸ್ ಮೂಲಕ ತಿಳಿಸಿ ವಿಚಾರಣೆಯನ್ನು ನಡೆಸಲಾಯಿತು.

ವಾದಿಗಳು ಸಲ್ಲಿಸಿದ ಮನವಿ ಪ್ರಕಾರ ವ್ಯಾಜ್ಯದ ಜಮೀನುಗಳು ಮೂಲತಃ ಬರದೂರು ಭಾಸ್ಕರ ತಂದೆ ಲೇಟ್ ಸಣ್ಣಕೊಟ್ರಪ್ಪ ಇವರ ಆಸ್ತಿಗಳಾಗಿದ್ದು ಸದರಿಯವರು ದಿನಾಂಕ:23.11.2012 ರಂದು ಮರಣ ಹೊಂದಿದ್ದು ಸದರಿಯವರ ಹೆಂಡತಿಯಾದ ಶ್ರೀಮತಿ ಬಿ ದೇವವ್ವಗಂಡ ಲೇಟ್ ಬಿ ಭಾಸ್ಕರ ಇವರು ನೇರ ವಾರಸುದಾರರಾರುತ್ತಾರೆಂದು ವ್ಯಾಜ್ಯದ ಜಮೀನನ್ನು ಪೋತಿ ವಾರಸತ್ವದ ಪ್ರಕಾರ ಹಕ್ಕುಬದಲಾವಣೆ ಮಾಡಲು ಕೋರಿರುತ್ತಾರೆ.

ಪ್ರತಿವಾದಿಗಳು ದಿನಾಂಕ:28.01.2016 ರಂದು ಲೀಖಿತ ತಕರಾರನ್ನು ಸಲ್ಲಿಸಿದ್ದು ಸದರಿಯವರ ಪ್ರಕಾರ ವ್ಯಾಜ್ಯದ ಜಮೀನುಗಳು ಪಿತ್ರಾರ್ಜಿತ ಆಸ್ತಿಗಳಾಗಿದ್ದು ತನ್ನ ತಂದೆಯವರಿಂದ ತನ್ನ ತಮ್ಮನಾದ ಶ್ರೀ ಭಾಸ್ಕರ ತಂದೆ ಸಣ್ಣಕೊಟ್ರಪ್ಪ ಇವರ ಹೆಸರಿನಲ್ಲಿ ಖಾತೆ ಮಾಡಿಸಿಕೊಂಡಿದ್ದು ಸದರಿ ಜಮೀನುಗಳಲ್ಲಿ ತಮಗೂ ಭಾಗವಿದ್ದು ತನ್ನ ತಮ್ಮನ ಹೆಂಡತಿಯಾದ ವಾದಿಗಳು ಪ್ರಸ್ತುತ ಖಾತೆ ಬದಲಾವಣೆಗಾಗಿ ಮನವಿಸಲ್ಲಿಸಿರುತ್ತಾರೆ, ಸದರಿ ಮನವಿಯನ್ನು ಪರಿಗಣಿಸದೇ ಹಕ್ಕುಬದಲಾವಣೆ ಆದೇಶವನ್ನು ರದ್ದುಗೊಳಿಸುವಂತೆ ಕೋರಿರುತ್ತಾರೆ.

ಉಭಯ ಪಕ್ಷಕಾರರು ದಿನಾಂಕ:11.08.2016 ರ ರಂದು ವಿಚಾರಣೆಗೆ ಹಾಜರಾಗಿ ಪ್ರಸ್ತುತ ವ್ಯಾಜ್ಯದ ಜಮೀನುಗಳು ಮೂಲತಃ ಪಿತ್ರಾರ್ಜಿತ ಆಸ್ತಿಗಳಾಗಿದ್ದು ಸದರಿ ಜಮೀನುಗಳ ಪಹಣಿ ಪತ್ರಿಕೆಯಲ್ಲಿ ಬರದೂರ ಭಾಸ್ಕರ ತಂದೆ ಸಣ್ಣಕೊಟ್ರಪ್ಪ ಇವರ ಹೆಸರಿನಲ್ಲಿ ಇದ್ದು ಪೋತಿ ವಾರಸ ಪ್ರಕಾರ ಹಕ್ಕುಬದಲಾವಣೆಗಾಗಿ ಮನವಿಸಲ್ಲಿಸಿದ್ದು ಈ ಆಸ್ತಿಗಳು ಪೂರ್ವಜರ ಆಸ್ತಿಗಳಾಗಿರುವುದರಿಂದ, ವಾದಿಗಳ ಗಂಡನಾದ ಭಾಸ್ಕರ ಮತ್ತು ಪ್ರತಿವಾದಿಗಳಾದ ಮಲ್ಲಿಖಾರ್ಜುನ ಇವರು ಸಹೋದರರಾಗಿರುವುದರಿಂದ ಸದರಿ ವ್ಯಾಜ್ಯದ ಜಮೀನುಗಳನ್ನು ವಾದಿ ಹಾಗೂ ಪ್ರತಿವಾದಿಗಳ ಹೆಸರಿಗೆ ಜಂಟಿಯಾಗಿ ಖಾತೆ ಮಾಡಿಕೊಡುವಂತೆ ರೂ 20ರ ಛಾಪಾ ಕಾಗದದ ಮೇಲೆ ಪ್ರಮಾಣ ಪತ್ರ ಸಲ್ಲಿಸಿರುತ್ತಾರೆ,

ಪ್ರಸ್ತುತ ಕಡತದಲ್ಲಿನ ದಾಖಲೆ ಹಾಗೂ ವಾದಿ ಪ್ರತಿವಾದಿಗಳು ಮಂಡಿಸಿದ ವಾದ ವಿವಾದವನ್ನು ಪರಿಶೀಲಿಸಲಾಗಿ ಈ ಕೆಳಕಂಡ ಅಂಶಗಳು ಕಂಡುಂದಿರುತ್ತವೆ.

1. ಪ್ರಸ್ತುತ ವ್ಯಾಜ್ಯದ ಜಮೀನುಗಳ ಪಹಣಿ ಪತ್ರಿಕೆಯನ್ನು ಪರಿಶೀಲಿಸಲಾಗಿ ಬರದೂರು ಭಾಸ್ಕರ ತಂದೆ ಸಣ್ಣ ಕೊಟ್ರಪ್ಪ ಎಂದು ನಮೂದಾಗಿರುತ್ತದೆ.
2. ಪ್ರಸ್ತುತ ಹಕ್ಕುಬದಲಾವಣೆಗೆ ವಹಿವಾಟು ಸಂಖ್ಯೆ 116 ರರಲ್ಲಿ ಪೋತಿ ವಾರಸತ್ವದ ಪ್ರಕಾರ ವಾದಿಗಳಾದ ಬಿ ದೇವವ್ವ ಗಂಡ ಭಾಸ್ಕರ ಇವರಿಂದ ಅರ್ಜಿ ಸ್ವೀಕೃತಿಗೊಂಡಿರುತ್ತದೆ.
3. ವಾದಿಗಳು ಸಲ್ಲಿಸಿದ ಮನವಿಯೊಂದಿಗೆ ಸಲ್ಲಿಸಿದ ವಂಶ ವೃಕ್ಷ ಧೃಡೀಕರಣ ಪತ್ರ ಸಂಖ್ಯೆ RD0038714110693ರ ಪ್ರತಿಯನ್ನು ಪರಿಶೀಲಿಸಲಾಗಿ ಮೂಲ ಪಟ್ಟಾದಾರರ ವಂಶವೃಕ್ಷವಾಗಿರುವುದಿಲ್ಲವೆಂದು ಕಂಡುಬಂದಿರುತ್ತದೆ.
4. ವ್ಯಾಜ್ಯದ ಜಮೀನಿನ ಪಟ್ಟಾದಾರರಾದ ಬಿ.ಭಾಸ್ಕರ ಇವರ ಮರಣ ಪ್ರಮಾಣ ಪತ್ರವನ್ನು ಪರಿಶೀಲಿಸಲಾಗಿ ಸದರಿಯವರು ದಿನಾಂಕ:23.11.2012 ರಂದು ಮರಣ ಹೊಂದಿರುವುದಾಗಿ ಕಂಡುಬಂದಿರುತ್ತದೆ ಹಾಗೂ ಸದರಿಯವರ ತಂದೆಯವರ ಹೆಸರು ಕೊಟ್ರಪ್ಪ ಎಂದು ನಮೂದಾಗಿದ್ದು ಪಹಣಿ ಪತ್ರಿಕೆಯಲ್ಲಿ ತಂದೆಯವರ ಹೆಸರು ಸಣ್ಣ ಕೊಟ್ರಪ್ಪ ಎಂದು ನಮೂದು ಇದ್ದು ವ್ಯತ್ಯಾಸವಿರುವುದು ಕಂಡುಬಂದಿರುತ್ತದೆ.

ಮೇಲ್ಕಂಡ ಎಲ್ಲಾ ಅಂಶಗಳನ್ನು ಪರಿಗಣನೆಗೆ ತೆಗೆದುಕೊಂಡು ವ್ಯಾಜ್ಯದ ಜಮೀನುಗಳನ್ನು ಪೋತಿ ವಾರಸತ್ವದ ಮೇರೆಗೆ ಜಂಟಿಯಾಗಿ ಖಾತೆ ಮಾಡಲು ಈ ನ್ಯಾಯಾಲಯದ ವ್ಯಾಪ್ತಿಗೆ ಇಲ್ಲವಾದ್ದರಿಂದ ಉಭಯರು ಉನ್ನತ ನ್ಯಾಯಾಲಯದಲ್ಲಿ ಪರಿಹಾರ ಕಂಡುಕೊಳ್ಳುವಂತೆ ಸೂಚಿಸಿ ಪ್ರಸ್ತುತ ಪ್ರಕರಣವನ್ನು ಈ ಹಂತದಲ್ಲಿಯೇ ಮುಕ್ತಾಯಗೊಳಿಸಬಹುದಾಗಿರರುವುದರಿಂದ ಈ ಕೆಳಕಂಡಂತೆ

## -: ಆದೇಶ :-

ಪೀಠಿಕೆಯಲ್ಲಿ ವಿವರಿಸಿದ ಸಂದರ್ಭ, ವಾಸ್ತವಾಂಶ, ಹಿನ್ನೆಲೆ ಮತ್ತು ಕಾರಣಗಳ ಆಧಾರದ ಮೇರೆಗೆ ಹಗರಿ ಬೊಮ್ಮನಹಳ್ಳಿ ತಾಲೂಕು ತಂಬ್ರಹಳ್ಳಿ ಹೋಬಳಿ ಹಿರೇಸೊಬಟಿ ಗ್ರಾಮದ ಸ.ನಂ.14, ಮತ್ತು 84/ಬಿ/1 ವಿಸ್ತೀರ್ಣ ಕ್ರಮವಾಗಿ 03.37 ಮತ್ತು 2.02 ಎಕರೆ ವಿವಾದಾಸ್ಪದ ಜಮೀನುಗಳಿಗೆ ಸಂಬಂಧಿಸಿದಂತೆ ಉಭಯರು ಉನ್ನತ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಿ ಪರಿಹಾರ ಕಂಡುಕೊಳ್ಳುವಂತೆ ಸೂಚಿಸಿ ಆದೇಶಿಸಿದೆ.

ಈ ಆದೇಶವನ್ನು ಹೇಳಿ ಬರೆಯಿಸಿ, ಗಣಕೀಕರಣ ಮಾಡಿಸಿ, ತಪ್ಪುಗಳನ್ನು ಸರಿಪಡಿಸಿ ಈ ದಿನ ದಿನಾಂಕ: 13 .10.2016 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಿದೆ.

13/10

[ನಾಗರಾಜ.ಹೆಚ್]
ಉಪ ತಹಶೀಲ್ದಾರರು,
ತಂಬ್ರಹಳ್ಳಿ.

1. ವಾದಿ ಮತ್ತು ಪ್ರತಿವಾದಿಗಳಿಗೆ.
2. ಭೂಮಿ ಶಿರಸ್ತೆದಾರರು, ತಾಲೂಕು ಕಛೇರಿ ಹಗರಿ ಬೊಮ್ಮನಹಳ್ಳಿ ಇವರಿಗೆ ಸೂಕ್ತ ಕ್ರಮಕ್ಕಾಗಿ ರವಾನಿಸಿದೆ.